ಭ್ರಷ್ಟ ರಾಜಕಾರಣಿಗಳಿಗೆ ಜನರ ಅಂತಿಮ ಎಚ್ಚರಿಕೆ!

ಚುನಾವಣೆ ದಿನ ಹತ್ತಿರವಾಗುತ್ತಿದ್ದಂತೆ ಕಾಂಗ್ರೆ ದುರಾಡಳಿತದ ಮುಕ್ತಾಯವೂ ಹತ್ತಿರವಾಗುತ್ತಿದೆ ಎನ್ನುವಂತೆ ಜನ ಪ್ರತಿಕ್ರಿಯಿಸುತ್ತಿದ್ದಾರೆ. ಕರ್ನಾಟಕ ದಲಿತ ಸಂಘರ್ಷ ಸಮಿತಿಯು "ಈ ಭ್ರಷ್ಟ ಚುನಾವಣೆಯನ್ನು ಭಹಿಷ್ಕರಿಸಿ" ಎಂಬ ಕರೆಗೆ ಕರ್ನಾಟಕದ ತುಂಬಾ ಚಾಲನೆ ಬಂದಿದೆ. ಪ್ರಶ್ನೆಗಳು ಮತ್ತು ಕಲ್ಲುಗಳೊಂದಿಗೆ ರಾಜಕಾರಣಿಗಳನ್ನು ಸ್ವಾಗತಿಸುತ್ತಿರುವ ದಲಿತರು, ರೈತರು ಕಾರ್ಮಿಕರು ಸುಳ್ಳು ಆಶ್ವಾಸನೆ ಬೆಳೆಯುತ್ತಿರುವ ಬೆಲೆಏರಿಕೆ ಭ್ರಷ್ಟಾಚಾರ ದುರಾಡಳಿತಗಳಿಗೆ ಉತ್ತರ ಹೇಳುತ್ತಿದಾರೆ. ಭಹಿಷ್ಕಾರ ಧಿಕ್ಕಾರಗಳ ನಡುವೆ ಚುನಾವಣಾ ಪ್ರಚಾರ ಮುಗಿಯುತ್ತಾ ಇದೆ. ಯಾರೇ ಗೆಲ್ಲಲಿ ಸೋಲಲಿ ಅಂತೂ ಜನರನ್ನು ಮರೆಯುವ ಯಾವುದೇ ಪಕ್ಷದ ದುಷ್ಟ ರಾಜಕಾರಣಿಗಳಿಗೆ ಅಂತಿಮ ಎಚ್ಚರಿಕೆಯನ್ನು ಈ ಚುನಾವಣೆಯಲ್ಲಿ ಜನ ಹೇಳಿದ್ದಾರೆ ದಲಿತ ಸಂಘರ್ಷ ಸಮಿತಿ ಮೈಸೂರು ಶಾಖೆಯ ಅನುಭವವೊಂದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

—ಸಂಪಾದಕ

ಪಂಚಮ

ಸಂಪುಟ : 6 | ಸಂಚಿಕೆ–24 | ಬೆಲೆ-50 ಪೈಸೆ | ಜನವರಿ 5, 1983

'ಕೆಂಡದ ನಡುವೆ' ಹೊಸ ತಿರುವು

ದಲಿತ ನೌಕರರೆಂದರೆ ತಮ್ಮ ಕಾಲಾಳುಗಳೆಂದು ದಲಿತ ಮಂತ್ರಿಶಾಸಕರೆಂದರೆ ತಮ್ಮ ಗುಲಾಮರೆಂದು ಭಾವಿಸಿ ನಡೆಯುತ್ತಿರುವ ಇಂದಿರಾ ಸರ್ಕಾರದ ತುಂಡು ಗುಂಡೂರಾವ್‌ರು ಸಿದ್ಧಾಪುರ ಬಿಡಿಓ ಮುನಿವೆಂಕಟಪ್ಪರನ್ನು ಸಸ್ಪೆಂಡ್ ಮಾಡಿದರು. ಕಾರಣ ಆ ಮುನಿವೆಂಕಟಪ್ಪ ತಮ್ಮ ಜನಾಂಗದ ನೋವನ್ನು ಕಾವ್ಯದ ಮೂಲಕತೋಡಿಕೊಂಡಿದ್ದರು. ಇದಕ್ಕೆ ಸರ್ಕಾರ ಕಣ್ಣು ಕೆಂಪಗೆ ಮಾಡಿ ಆ ಮುನಿವೆಂಕಟಪ್ಪನ್ನು ಸಸ್ಪೆಂಡ್ ಮಾಡಿದ್ದಕ್ಕೆ ಪ್ರತಿಕ್ರಿಯೆಯಾಗಿ ಈಗ ಜನತೆ ಕಣ್ಣು ಕೆಂಪಗೆ ಮಾಡಿ ಸರ್ಕಾರದ ಕಡೆ ನೋಡುತ್ತಿದೆ. ಮೊನ್ನೆ ಸಿರಸಿ ಕನ್ನಡ ಸಾಹಿತ್ಯ ಸಮ್ಮೇಳನದ ಮುಂದೆ ಆರ್. ವಿ. ಬಂಢಾರಿ, ಬಿ. ಕೃಷ್ಣಪ್ಪ, ಅವದಾನಿ, ಚಂಪಾ, ಸಿವಿ. ಪಾಟೀಲ ಮೊದಲಾಗಿ ಧರಣಿ ನಡೆಸಿ ಮುನಿವೆಂಕಟಪ್ಪರ ಸಸ್ಪೆಂಡ್‌ಗೆ ಪ್ರತಿಭಟಿಸಿದರು. ಈಗ ಬೆಂಗಳೂರಿನ ಕನ್ನಡ ಸಂಘ ಪ್ರಗತಿಪರರು ವಿಧಾನ ಸೌಧದಮುಂದೆ ಧರಣಿ ಕೂರುತ್ತಿರುವರು. ಈಗಲಾದರೂ ಸರ್ಕಾರ ತನ್ನ ತಪ್ಪು ತಿದ್ದಿಕೊಳ್ಳದಿದ್ದರೆ ಈ ಘಟನೆಯಿಂದಾಗಿ ಸರ್ಕಾರವನ್ನೇ ಉರುಳಿಸುವ ಶಕ್ತಿಯನ್ನು ಈ ಪ್ರಕರಣ ಪಡೆದುಕೊಳ್ಳುವ ಲಕ್ಷಣವಿದೆ.



ಸರ್ಕಾರದ ಕಣ್ಣು ಕೆಂಪು ಮಾಡಿದ ಮುನಿವೆಂಕಟಪ್ಪನವರ ಕವನ ಸಂಕಲನ

ಈ ದೇಶದ ದಲಿತರ, ಬಡವರ ಹೆಣಬರಹ ಬರೆಯಲು ಚುನಾವಣೆಗಳು ರೆಡಿಯಾಗುತ್ತಿರುವ ಹೊತ್ತಿನಲ್ಲೆ ನಾವು ಅನ್ನ ನೀರಿಲ್ಲದೆ ಹಳ್ಳಿಗಳಲ್ಲಿ ಅಲೆಯುತ್ತಿದ್ದೆವು. ಹೋರಾಟದ ಹಾಡುಗಳನ್ನು ಹಾಡಿಕೊಂಡು ಜನರ ನಡುವೆ "ಕಳ್ಳ ವೋಟಿನ ಕಳ್ಳ ನೋಟಿನ ರಾಜ್ಯವೊಂದು ರಾಜ್ಯವೇ?" ಎಂದು ಕೂಗುತ್ತಿದ್ದೆವು.

ನಮ್ಮ ಅಲೆದಾಟದ ನಡುವೆ ನಾವು ಕಂಡ ಬದುಕು ಇಲ್ಲಿದೆ. ನಾವು ತಿರುಗಾಡಿದ್ದು ಸಮಾಜ ಕಲ್ಯಾಣ ಸಚಿವ ವೆಂಕಟರಮಣರ ಕ್ಷೇತ್ರ. ಅವರುಈ ಕ್ಷೇತ್ರದಲ್ಲಿ ಯಾವ ಒಳ್ಳೆಯ ಕೆಲಸವನ್ನೂ ಮಾಡಿಲ್ಲ. ಅದನ್ನು ಜನರಬಾಯಿಂದಲೇ ಕೇಳಬೇಕು. ಮೊದಲು ನಾವು ಕಾಲಿರಿಸಿದ್ದು 'ನಗರ್ಲೆ' ಎಂಬ ಊರಿಗೆ. ಸಾವಿರಾರು ಬಡವರಿಂದ ತುಂಬಿರುವ ಊರು. ನಮ್ಮ ಗುಂಪು ಊರೊಳಗೆ ಹೋಗುತ್ತಲೇ 'ಯಾರೋ ವೋಟಿನವರು ಬಂದರು' ಎಂಬ ಭಾವನೆಯಿಂದ ಯಾರು ಮಾತಾಡಿಸಲೇ ಇಲ್ಲ. ಆದರೆ ನಾವು ಹಾಡುಗಳ ಶುರುಮಾಡಿದಾಗ ಜನ ಗುಂಪುಗುಂಪಾಗ ತೊಡಗಿದರು. ತಾವು ಹಿಂದೆಂದೂ ಕೇಳಿರದ ಹಾಡು ಕೇಳಿ ಅಚ್ಚರಿಪಡತೊಡಗಿದರು.

ಒಬ್ಬಾತ : "ನಾವು ಯಾವ ಸೂಳೆಮಕ್ಕಳಿಗೂ ವೋಟಾಕಕಿಲ್ಲ ಸಾಮಿ" ಎಂದ.

ಮತ್ಯಾರೊ ಮಜ್ಜಿಗೆ ಕೊಟ್ಟರು. ನೆತ್ತಿಸುಡುವ ಬಿಸಿಲು ಲೆಕ್ಕಿಸದೆ ಮುಂದಲೂರಿಗೆ ಹೊರಟಾಗ ನಗರ್ಲೆಯ ಅನೇಕ ಜನರು ನಮ್ಮ ಹಿಂದೆ ಹಿಂದೆ ಬಂದರು.

ಹನಿಯಂಬಳ್ಳಿ ಹೊಕ್ಕಾಗ ದಲಿತರ ಕೇರೀಲಿ ನಮಗೆ ಮೊದಲು ಎದುರುಗೊಂಡಿದ್ದು ವೆಂಕಟರಮಣರ ಫೋಟೊ ಇರುವ ಭಿತ್ತಿಪತ್ರ. ಹಾಡು ಮುಗಿಸಿ ನಾವು ಊರು ಬಿಡುವಾಗ ವೆಂಕಟರಮಣರ ಪ್ರಚಾರಪತ್ರಕ್ಕೆ ಸಗಣಿ ಹೊಡೆತಬಿದ್ದಿತ್ತು. ಬಿಳಿಗೆರೆ ಗ್ರಾಮ ತಲುಪುವಾಗ ಕತ್ತಲಾಗಿತ್ತು. ಗುರುತು ಪರಿಚಯವಿರದ ಊರಿನಲ್ಲಿ ನೂರಾರು ಜನ ನಮ್ಮ ಹಾಡುಗಳ ಕೇಳಿದರು. ಯಾರಿಗೂ ವೋಟು ಮಾಡಬಾರದೆಂಬ ವಿಚಾರ ವ್ಯಾಪಕವಾಗಿ ಚರ್ಚೆಯಾಗುತ್ತಿತ್ತು.

ಯಾರೋ ಒಬ್ಬರು ನನ್ನನ್ನ ಕರೆದು ಕೇಳಿದರು.

"ಊಟ ಮಾಡಿದ್ದೀರಾ?"

"ಇಲ್ಲ" ಅಂದೆ.

ಕೆಲವೇ ನಿಮಿಷಗಳಲ್ಲಿ ನಮಗೆಲ್ಲಊಟದವ್ಯವಸ್ಥೆಯಾಯಿತು, ರಾತ್ರಿ "ಪತ್ರ ಸಂಗಪ್ಪನ ಕಗ್ಗೊಲೆ" ನಾಟಕವನ್ನು ನೋಡಿದ ಜನರು ನಮ್ಮ ಮಂತ್ರಿ ಶಾಸಕರ ಧೂರ್ತತನದ ಬಗ್ಗೆ ಮಾತಾಡುತ್ತಿದ್ದರು

(ಕೊನೆಯ ಪುಟಕ್ಕೆ)

ದುರ್ಬಲ ವರ್ಗದ ಏಳಿಗೆಗಾಗಿ ಹತ್ತಾರು ಕಾರ್ಯಕ್ರಮಗಳು

ಹರಿಜನ-ಗಿರಿಜನರು ಮತ್ತು ಇತರ ಹಿಂದುಳಿದ ವರ್ಗದವರ ಏಳಿಗೆಗಾಗಿ ಸರ್ಕಾರ ಸತತ ಶ್ರಮಿಸುತ್ತಿದೆ. ಅವರ ಜೀವನದ ಸ್ಥಿತಿಗತಿಗಳ ಸುಧಾರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಈ ಕಾರ್ಯಕ್ರಮಗಳನ್ನು ರಾಜ್ಯ ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸುತ್ತಿದೆ.

- ದುರ್ಬಲ ವರ್ಗದ ಮಕ್ಕಳಿಗೆ ನರ್ಸರಿ ಶಾಲೆ, ಆಶ್ರಮ ಶಾಲೆ, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ. ಅವರಿಗೆ ಅಗತ್ಯ ಪುಸ್ತಕ, ಮತ್ತಿತರ ಸಲಕರಣೆ, ಉಡುಪುಗಳು ಹಾಗೂ ವಿದ್ಯಾರ್ಥಿವೇತನಗಳ ಸೌಲಭ್ಯವಿದೆ.
- ವೃತ್ತಿ ತರಬೇತಿ ಪಡೆಯುವ ಮಕ್ಕಳಿಗೆ ಶಿಷ್ಯವೇತನ ಮತ್ತು ಉದ್ಯೋಗಾವಕಾಶಗಳ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
- ಸ್ಪರ್ಧಾತ್ಮಕ ಪರೀಕ್ಷೆಗೆ ಕೂರುವ ಪದವೀಧರರಿಗೆ ಉಚಿತ ತರಬೇತಿ ನೀಡಲಾಗುತ್ತದೆ.
- ವಕೀಲ ವೃತ್ತಿ ಕೈಗೊಳ್ಳುವ ಪದವೀಧರರಿಗೆ ನಾಲ್ಕು ವರ್ಷ ಕಾಲ ತಿಂಗಳಿಗೆ 500 ರೂಪಾಯಿ ಸ್ಟೈಪೆಂಡ್ ನೀಡಲಾಗುತ್ತದೆ.
- ಈ ವರ್ಗದ ಜನತೆಗೆ ಜನತಾ ಮನೆಗಳ ಸೌಲಭ್ಯ—ನಿವೇಶನ ನೀಡಲಾಗುತ್ತದೆ.
- ವಿಶೇಷ ಘಟಕ ಯೋಜನೆಯನ್ವಯ ರಾಜ್ಯ ವಿಧಾನಸಭೆಯ ಮೀಸಲು ಕ್ಷೇತ್ರಗಳ ಆಯ್ದ ೫ ಗ್ರಾಮಗಳಲ್ಲಿ ಮತ್ತು ಇತರ ತಾಲ್ಲೂಕುಗಳ ಆಯ್ದ ೨ ಗ್ರಾಮಗಳಲ್ಲಿ ಹರಿಜನರ ಸಮಗ್ರ ಪ್ರಗತಿಗಾಗಿ ವಿಶೇಷ ಕಾರ್ಯಕ್ರಮಗಳ ವ್ಯವಸ್ಥೆ ಇದೆ. ಈ ಕಾರ್ಯಕ್ರಮದಡಿಯಲ್ಲಿ ಕೃಷಿ ಕಾರ್ಮಿಕರು, ಚಮ್ಮಾರರು, ಜೀತ ವಿಮುಕ್ತರು ಸಣ್ಣ ಪುಟ್ಟ ವೃತ್ತಿ ನಿರತರು—ಮುಂತಾದವರ ಜೀವನ ಸುಧಾರಣೆಗೆ ವಿಶೇಷ ಗಮನ ನೀಡಿದೆ.
- ರಾಜ್ಯದ ಕೊಡಗು, ಮೈಸೂರು, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹರಡಿರುವ ಗಿರಿಜನರ ಸಮಗ್ರ ಕ್ಷೇಮಕ್ಕಾಗಿ ಗಿರಿಜನ ಉಪಯೋಜನೆಯಲ್ಲಿ ವಿಶೇಷ ಅವಕಾಶಗಳನ್ನು ಕಲ್ಪಿಸಿದೆ.
- ದುರ್ಬಲ ವರ್ಗದ ಜನತೆಗೆ ಸೂಕ್ತ ಶಿಕ್ಷಣ ಸೌಲಭ್ಯ ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸುವುದೇ ಈ ಎಲ್ಲ ಕಾರ್ಯಕ್ರಮಗಳ ಮುಖ್ಯ ಗುರಿ.

ವಿವರಗಳಿಗೆ ಮತ್ತು ಸಹಾಯ ಸೌಲಭ್ಯಗಳಿಗೆ ಆಯಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳನ್ನು ಭೇಟಿ ಮಾಡಿರಿ.

ಪ್ರಕಟಣೆ: ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಇವರಿಗೆ ನೆರವಾಗಲು ವಿನಂತಿ

1982ರ ಅಕ್ಟೋಬರ್ 27ರಂದು ಸಾವಿಗೀಡಾದ ಜಿ. ಸೋಮಶೇಖರ್ ದಲಿತ ಸಂಘರ್ಷ ಸಮಿತಿಯ ಹೋರಾಟದ ಚಿಲುಮೆಯಂತಿದ್ದವರು. ಈ ಜಾತ್ಯಾಂಧ ಕ್ರೂರ ವ್ಯವಸ್ಥೆಯಲ್ಲಿ ನೊಂದವರೆಲ್ಲರನ್ನು ಎಚ್ಚರಿಸುತ್ತಾ, ಸಂಘಟಿಸುತ್ತಾ, ಓದುತ್ತಾ, ಪತ್ರಿಕೆಯೊಂದರಲ್ಲಿ ಪುಡಿಕಾಸಿಗಾಗಿ ದುಡಿಯುತ್ತಾ ಇದ್ದವರು. ಈ ಪುಡಿಗಾಸನ್ನೇ ತಮ್ಮ ಒಪ್ಪೊತ್ತಿನ ಊಟಕ್ಕೆಂದು ನಂಬಿಕೊಂಡಿದ್ದ ಆತನ ವೃದ್ಧ ತಂದೆತಾಯಿಗಳು ಈಗ ಅನಾಥ ಸ್ಥಿತಿಯಲ್ಲಿದ್ದಾರೆ. ಕೆಳಗಿನ ವಿಳಾಸಕ್ಕೆ ತಮ್ಮ ಕೈಲಾದಷ್ಟು ಹಣ ಕಳಿಸುವುದರ ಮೂಲಕ ಸೋಮ ಶೇಖರ್ ತಂದೆತಾಯಿಗಳಿಗೆ ನೆರವಾಗುವಂತೆ ದಲಿತ ಸಂಘರ್ಷ ಸಮಿತಿ ವಿನಂತಿಸುತ್ತದೆ.

ಎಂ. ರುದ್ರಸ್ವಾಮಿ
ಸಮಾಜಶಾಸ್ತ್ರ ಅಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಾಸನ



ಜಿ. ಸೋಮಶೇಖರ್

ನಿನ್ನ ಹೆಜ್ಜೆ ಹುಡುಕುತಾ....

ದೇಶ ಹತ್ತಿ ಉರಿಯುತ್ತಿದೆ
ಬೆಂದು ಬೂದಿಯಾಗುತ್ತಿದೆ
ಇಂಥ ವೇಳೆ ನಮ್ಮ ಬಿಟ್ಟು
ನೀನು ದೂರ ಹೋದೆಯಾ...?

ಕಷ್ಟವೆಲ್ಲ ಗಂಟುಮಾಡಿ
ಬೆನ್ನ ಹಿಂದೆ ಕಟ್ಟಿಕೊಂಡು
ದಲಿತರನ್ನು ಕೂಡಿಕೊಂಡು
ಹೋರಾಟಕ್ಕೆ ಬಂದವನೇ
ನೀನು ದೂರ ಹೋದೆಯಾ....?

ತುತ್ತು ಅನ್ನ ಚೂರು ಸೆರಳು
ತುಂಡು ಬಟ್ಟೆ ಕೂಡ ತೊಡಲು
ದರಿದ್ರವಾದ ದೇಶದಲ್ಲಿ

ಹೊಸತು ದಾರಿ ಕಂಡುಕೊಂಡ
ನೀನು ದೂರ ಹೋದೆಯಾ...?

ಸುಲಿಗೆಕೋರ ವರ್ಗಗಳ
ಬೆಂಬಲಕ್ಕೆ ಇಂಡ್ಯಾದಲ್ಲಿ
ದೇವ್ರು ಭೂತ ಎಲ್ಲ ಇರಲು
ಪುಣ್ಯ ನದಿ ಕಾವೇರಿಯೂ
ಶಾಮಿಲಾಗಿ ನಿಂತಳೇ....?

ಕಷ್ಟ ನೋವುಗಳಲಿ ಬೆಂದ
ದಲಿತರನ್ನು ಎತ್ತಿ ನಿಲಿಸಿ
ನಡೆಸಿಕೊಂಡು ಹೋಗುತಿದ್ದೆ
ಕಾಲು ಜಾರಿ ಬಿದ್ದೆಯಾ
ನೀನು ದೂರ ಹೋದೆಯಾ...?

ನಿನ್ನನಗಲಿ ಇಂದು ನಾವು
ಎದೆಯ ತುಂಬ ನೋವು ತುಂಬಿ
ಕಗ್ಗತ್ತಲೆಯ ದಾರಿಯಲ್ಲಿ
ನಿನ್ನ ಹೆಜ್ಜೆ ಹುಡುಕುತಾ

ಕೆಂಪು ಜ್ಯೋತಿಯನು ಅರಸಿ
ಹೊರಟು ನಿಂತಿದ್ದೇವೆ
ಹುತಾತ್ಮನಾದ ನೀನು
ಸ್ವೀಕರಿಸು ವಂದನೆ....
ನಮ್ಮ ಕೆಂಪು ವಂದನೆ

—ಎಂ. ಸೋಮ ಶೇಖರ್

ಭ್ರಷ್ಟ ಚುನಾವಣೆ : ಕತ್ತಲೊಳಗೆ ಬೆಳಕಿನ ಸುಳಿವು

ಸುಮಾರು 150 ಮನೆಗಳಿರುವ ಗೌರಿಬಿದನೂರು ತಾಲ್ಲೂಕು, ನಗರಗೆರೆ ಹೋಬಳಿ ಜಿ. ಕೊತ್ತೂರು ಗ್ರಾಮ ಘನ ಸರ್ಕಾರದ ಪ್ರಗತಿ ಘೋಷಣೆಗಳಿಗೆ ವಿರೋಧವಾಗಿ ನಿಂತಿದೆ. ಕಡ್ಡಾಯ ಶಿಕ್ಷಣವಂತೂ ಈ ಹಳ್ಳಿಯಲ್ಲಿ ಮುಗುಚಿ ಬಿದ್ದಿದೆ. ಅಲ್ಲಲ್ಲಿ ಕಾಣುವ ಗೋಪುರಗಳು (ಜನತಾ ಮನೆ) ಬಿರುಗಾಳಿಗೆ, ಮಳೆಗೆ ಸಿಕ್ಕಿ ಅದನ್ನು ತಡೆಯಲು ಶಕ್ತಿ ಇಲ್ಲದ ಸುಸ್ತಾಗುವ ರೀತಿ ಕಾಣುತ್ತಿವೆ. ಅವರ ಬಡತನದ ರೇಖೆಯನ್ನು ವಿವರಿಸಲು ಸಾಹಿತ್ಯದಲ್ಲಿ ಸರಿಯಾದ ಪದಗಳಿವೆಯೋ ಇಲ್ಲವೋ ಎಂದು ಅನುಮಾನವಾಗುತ್ತದೆ. ಪ್ರಗತಿಪರ ವಿಚಾರ, ವೈಜ್ಞಾನಿಕ ದೃಷ್ಟಿಕೋಣದ ವಿಚಾರಗಳು ಆಕಾಶದಲ್ಲಿರುವ ನಕ್ಷತ್ರಗಳೋಪಾದಿಯಲ್ಲಿ ಎಟುಕಾದ ರೀತಿ ಇವೆ. ಇಲ್ಲಿನ ಜನರು ಅನುಭವಿಸುವ ಪರಿಸರದ ನೋವುಗಳು ಅವರನ್ನು ಎಡೆಬಿಡದೆ ಆವರಿಸಿಕೊಂಡಿವೆ.

ಸುಮಾರು ಸಂಜೆ 5 ಗಂಟೆಗೆ ಸುತ್ತಾಡಿ ಬರಲು ಊರಾಚೆ ನಡೆದೆವು. ರಸ್ತೆಯ ಪಕ್ಕದಲ್ಲಿ ಒಬ್ಬ ಮಧ್ಯಮ ವರ್ಗದ ವ್ಯಕ್ತಿ ಕಂಡು ಮಾತು ಪ್ರಾರಂಭಿಸಿದ. ಆತನ ಮಾತು ಬಹಳ ಚುರುಕಾಗಿ ಇತ್ತು. ಇದು ನಾಯಿಗಳ ರಾಜ್ಯ, ನರಿಗಳ ರಾಜ್ಯ. ಎಲ್ಲಿ ನೋಡಿದರೂ ಲಂಚಾವತಾರ. ಬಡವರ ಉದ್ಧಾರ ಎಂದು ತಮ್ಮ ತಮ್ಮ ಮನೆವರುಗಳನ್ನು ಉದ್ಧಾರ ಮಾಡಿಕೊಳ್ಳುತ್ತಿದ್ದಾರೆ. ಬೂಟ್ ಪಾಲಿಷ್ ಮಾಡುವರೇ ಈ ದಿನ ಹರಿಜನ-ಗಿರಿಜನರ ಉದ್ಧಾರವಾಗುತ್ತದೆ ಎಂದು ಏನೇನೊ ಮಾತಾಡತೊಡಗಿದ ಈತನ ಮಾತು ಕೇಳಿ ಒಂದು ತರಹ ಆಯಿತು. ಊಟದ ನಂತರ ಅಂಬೇಡ್ಕರ್ ಹುತಾತ್ಮ ದಿನಾಚರಣೆಯ ಬಗ್ಗೆ ಕಾರ್ಯಕ್ರಮ ಕ್ರಾಂತಿಗೀತೆಗಳಿಂದ ಪ್ರಾರಂಭ ಮಾಡಿದೆವು. ಅಂಬೇಡ್ಕರ್ ವಿಷಯ ತಿಳಿದ ಮೇಲೆ ಸಭೆಯಲ್ಲಿ ಓಟಿನ ಬಗ್ಗೆ ಪ್ರಸ್ತಾಪ ನಡೆಯಿತು. [ತೆಲುಗಿನಲ್ಲಿ ಸಂಭಾಷಣೆ ನಡೆಯಿತು. ಕನ್ನಡದಲ್ಲಿ ಬರೆಯಲಾಗಿದೆ]

ದಸಂಸ : ಲಂಚಕೋರರಿಗೆ, ಕಳ್ಳಕದೀಮರಿಗೆ ನೀವು ಓಟು ಹಾಕುತ್ತೀರಾ ?

ಉತ್ತರ : ಆ ನನ್ ಮಕ್ಕಳ್‌ಗೆ ಮಾತ್ರ ಬ್ಯಾಡ ಸ್ವಾಮಿ

ದಸಂಸ : ಅದು ಇದು ಮಾಡುತ್ತೀನಿ ಎಂದು ಸುಳ್ಳು ಭರವಸೆಗಳನ್ನು ಕೊಡುವವರಿಗೆ ನಿಮ್ಮ ಓಟಾ

ಉತ್ತರ : ಇಲ್ಲ, ಇದುವರೆಗೂ ಇದೇ ಆಗಿದೆ. ನನ್ನ ಮನೆಗೆ ಬರುತ್ತಾರೆ. ಏನೇನೊ ಮಾಡ್ತೀನಿ ಎಂದು ಹೇಳುತ್ತಾರೆ. ನಂತರ ಇವರ ದರ್ಶನವೇ ಇಲ್ಲ. ಇವರಿಗೆ ಮಾತ್ರ ಓಟು ಬ್ಯಾಡ.

ದಸಂಸ : ಹಾಗಾದರೆ ಇನ್ಯಾರಿಗೆ ಹಾಕ್ತೀರಾ ?

ಉತ್ತರ : ಸ್ವಲ್ಪ ಹೊತ್ತು ಸಭೆ ಮೌನ. ಒಬ್ಬ "ಯಾರಿಗೂ ಹಾಕುವುದಿಲ್ಲ. ಯಾರೂ ನಮ್ಮ ನಿಜವಾದ ಉದ್ಧಾರಕರಲ್ಲ" ಎಂದಾಗ ಸಭೆ ಒಕ್ಕೊರಳಿನಿಂದ ಅನುಮೋದಿಸಿತು.

—ಕೆ. ಎಂ. ಕೊಮ್ಮಣ್ಣ
ಗೌರಿ ಬಿದನೂರು

ವಿಚಾರವಾದಿಯ ಕ್ರೌರ್ಯ

ಎಲ್ಲಾ ಜಾತಿ-ವರ್ಗಗಳನ್ನೂ ಮೀರಿದಂಥ ಒಂದು ಕತ್ತಲೆ ಜಗತ್ತು ಮಹಿಳೆಯದು. ಪಂಚಮ ಈ ಆಶೆ ಅತಾಶೆ ಯಾತನೆಗಳ ಜಗತ್ತನ್ನು ಪರಿಚಯಿಸುತ್ತಾ ಓದುಗರಿಂದ ಪ್ರತಿಕ್ರಿಯೆ ಅನುಭವ ವಿಚಾರಗಳನ್ನು ಸ್ವಾಗತಿಸುತ್ತದೆ.

—ಸಂಪಾದಕ

ಮಾನ್ಯ ಪಂಚಮ ಸಂಪಾದಕರೆ,

ನೀವು ದಲಿತರ ಬಗ್ಗೆ ಬಹಳ ಲೇಖನಗಳನ್ನು ಅಚ್ಚು ಮಾಡುತ್ತಿದ್ದೀರಿ, ಸದ್ಯ, ನಾನು ನಿಮ್ಮ ಮುಂದೆ ಇಡಲಿರುವ ಒಂದು ಘಟನೆ, ಖಂಡಿತ ಆಶ್ಚರ್ಯ ಹುಟ್ಟಿಸಬಹುದು. ಪುರುಷಪ್ರಧಾನವಾದ ಈ ಸಮಾಜದ ಇನ್ನೊಂದು ಮುಖಕ್ಕೆ ಇದು ಕನ್ನಡಿಯಾಗಬಹುದು.

ಧಾರವಾಡದಲ್ಲಿರುವ ನನ್ನ ಗೆಳತಿಯೊಬ್ಬಳು 'ಹೊಸರೀತಿ'ಯಲ್ಲಿ ಬರೆಯುತ್ತಿರುವ ಲೇಖಕಿಯರಲ್ಲೊಬ್ಬಳು. ಅವರು ತನ್ನ ಜಾತಿಯವನಲ್ಲದ, ಪ್ರತಿಭಾವಂತ ಸಹೋದ್ಯೋಗಿ ಸ್ನೇಹಿತನನ್ನು ಪ್ರೀತಿಸಿದಳು. ಅವನಿಗೆ ಬೇರೆ ಮದುವೆ ನಿಶ್ಚಯವಾಗಿದ್ದರೂ ಅದನ್ನು ಅವನು ಮುರಿದು ಕೊಳ್ಳುವೆನೆಂದು ಹೇಳಿ, ಭರವಸೆಯಿತ್ತು ಆಕೆಯಲ್ಲಿ ಭರವಸೆ ತುಂಬಿದನು. (ಆದರೆ ಆ ದಿಶೆಯಲ್ಲಿ ಯಾವ ಪ್ರಾಮಾಣಿಕ ಯತ್ನವನ್ನು ಮಾಡಿರಲಿಲ್ಲ ಎಂದು ನಂತರ ತಿಳಿಯಿತು.) ಮದುವೆ ಒಂದು ವಾರವಿದೆ ಎನ್ನುವಾಗ, ಒಂದು ರಾತ್ರಿ ಒಂಬತ್ತೂವರೆಗಂಟೆ. ಊಟಮಾಡಿಕೊಂಡು ವಾಪಸಾಗುವಾಗ, ವಾತಿಗೆ ಮಾತು ಬಂದು, ಆ ಸಾಹಿತಿ, ನನ್ನ ಗೆಳತಿಯನ್ನು ಥಳಿಸಿದನು. ಸಿಗರೇಟನಿಂದ ಸುಟ್ಟನು. ಆಕೆ, ಮರ್ಯಾದೆಗೆ ಹೆದರಿ ಸುಮ್ಮ ಮನೆಗೆ ಹೋಗೋಣ, ಎನ್ನುತ್ತಿದ್ದರೂ ಭರ್ತ್ಸನೆ ಮಾಡುತ್ತ ಕಪಾಳಕ್ಕೆ ಹೊಡೆದನು. ಅವಳು ರಿಕ್ಷಾದವನಿಗೆ, ದಯವಿಟ್ಟು ಇಳಿಸಿಬಿಡಿ. ನಾನು ಮನೆಗೆ ಹೋಗಬೇಕು, ಎಂದು ಗೋಗರೆದಳು. ಅದರಂತೆ ಅವನು ಇಳಿಸಲು ಈ ಧೀಮಂತ ವಿಚಾರವಾದಿಯು ತಾನೂ ಹಿಂಬಾಲಿಸಿ ರಸ್ತೆಯಲ್ಲಿ ಅವಳ ತೋಳುಹಿಡಿದು ಕೊಂಡು ಹೋಗತೊಡಗಿದನು. ಅವರಿಬ್ಬರೂ ಕರ್ನಾಟಕ ಕಾಲೇಜಿನ ಬಳಿ ಬಂದಾಗ, ಸಪ್ತಾಪುರದ ಕಡೆ ಚಾಚಿಕೊಂಡಿರುವ ಬಾಗಿಲಿನ ಮೂಲಕ, ಒಳಗೆ ಹೋಗಬೇಕೆಂದು ಅವನು ಆಕೆಯನ್ನು ದೂಡತೊಡಗಿದನು. ಆಕೆ ಭಯದಿಂದ ತತ್ತರಿಸಿ ಈ ಪುಂಡತನ ಯಾಕೆಬೇಕು, ಗಂಡು ಎಂದರೆ ಧೀಮಂತವಾಗಿ ನಡಕೋಬೇಕು, ಎಂದಳು. ಅವನು ಕ್ರುದ್ಧನಾಗಿ, ನಾನದನ್ನು Prove ಮಾಡುತ್ತೇನೆ ಬಾ, ಎಂದು ಮುಳ್ಳು ಕಂಟಿಗಳ ಮೇಲೆಲ್ಲ ದರದರ ಎಳೆದುಕೊಂಡು ಹೋದನಲ್ಲದೆ ಕತ್ತು ಹಿಸುಕ ತೊಡಗಲು ಆಕೆ ಭಯದಿಂದ, ನಾನೇನೂ ನಿಮ್ಮ ಜತೆ ಮದುವೆ ಆಗಬೇಕೆಂ ಅನ್ನಲ್ಲ, ಬಿಡಿ ಬಿಡಿ, ಎಂದು ಚೀರಿದಳು ಅವನು ಖಳನಂತೆ ವಿಕಟಾಟ್ಟಹಾಸ ಮಾಡಲು, ಆಕೆಯ ಕೂಗನ್ನು ಕೇಳಿದ ಪರಿಚಿತ ಮಂದಿ, ಜಮಾಯಿಸಿದರು. ಆಗಲೂ ಅವನು ನೀವೆಲ್ಲ ಯಾರ್‍ರಿ, ಈಕೆ ನನಗೆ ಸಂಬಂಧಿಸಿದೊಳು. ನಡೀರಿ, ಎನ್ನುತ್ತಿದ್ದನು. ಜನರ ಮಧ್ಯೆ ಪರಿಚಯದ ಪಾಟೀಲ್ ಡಾಕ್ಟರ್ ಇದ್ದರು. ಅವರು ನೀವು ಬನ್ನೀಮ್ಮ, ಮನೆಗೆಬಿಡ್ತೀನಿ ಎಂದು ಆಕೆಯನ್ನು ಮನೆಗೆ ಒಯ್ದು, ಗಾಯಗಳಿಗೆ ಔಷಧಿಕೊಟ್ಟರು. ಆಸಾಹಿತಿ ಅಂದಿನಿಂದ ಆರಸ್ತೆಯಲ್ಲಿ ಅಡ್ಡಾಡಲಿಲ್ಲ ! ಇದಾದ ಎರಡು ಮೂರು ದಿನಗಳಲ್ಲಿ, ಆಕೆಯ ಹಿತಚಿಂತಕರು ಹಲವರು ಹೋಗಿ ಮಧ್ಯಸ್ಥಿಕೆ ಮಾಡಲು, ನನ್ನದು ತಪ್ಪಾಯಿತು, ಮದುವೆ ಆಗ್ತೀನಿ, ಎಂದು ಮುಖ ಸಣ್ಣ ಮಾಡಿದನು ಮದುವೆ ಆಯಿತು. ಹಿತೈಷಿಗಳು ಕೆಲವರಿದ್ದರು. ಆಕೆ ಫೋಟೋ ತೆಗೆಸಬೇಕೆನ್ನುವಾಗ ಸಪ್ಪಗಿದ್ದನು ಅದಾದ ಮೇಲೆ, ಗುಟ್ಟಾಗಿ ಪೋಲೀಸ್ ಠಾಣೆಗೆ ಹೋಗಿ ನನಗೆ ಕತ್ತಿ ಚಾಕು, ಚೂರಿ ತೋರಿಸಿ ಬಲವಂತ ಮಾಡಿ, ತಾಳಿ ಕಟ್ಟಿ... ಲಾಯಿತು. ಎಂದು ದೂರಿತ್ತನು. ಅಲ್ಲದೆ, ಮೈಸೂರಿನಲ್ಲಿ... ನಡೆಯಲಿದ್ದ ನಿಶ್ಚಿತಾರ್ಥಕ್ಕೆ ಹೋದನೆಂದು ತಿಳಿಯಿತು... ಜೀವಕಳಕೊಳ್ಳಲು ಯತ್ನಿಸಿದ ನನ್ನ ಗೆಳತಿಯನ್ನು, ನಾವೆಲ್ಲ... ಸಾಂತ್ವನ ಹೇಳಿ ಉಳಿಸಿಕೊಂಡಿದ್ದೇವೆ. ವಿಚಾರವಾದಿಗಳೆ... ಹೀಗೆ ಮಾಡಿದರೆ, ಅನಕ್ಷರಸ್ಥ, ಹಳ್ಳಿಗರು ಏನು ತಾನೆ... ಮಾಡಿಯಾರು ?

ಇದಿಷ್ಟು, ನಾನು ತುಂಬ ನೋವಿನಿಂದ ಬರೆದೆ. ಈ... ನಮ್ಮ ಸಾಮಾಜಿಕರು ಇದನ್ನೋದಿ ಹೇಗೆ ಪ್ರತಿಕ್ರಿ... ಸೂಚಿಸುತ್ತಾರೋ, ನನಗೆ ತಿಳಿವ ಕೂತೂಹಲ.

—ಸರಳಾಪುರಾಣಿ...

ಮಹಿಳೆ

ಸಂಘಟನೆ ಮತ್ತು ಹೋರಾಟವೇ, ನಮ್ಮದಾರಿ

ಮಂಡ್ಯ ತಾಲ್ಲೂಕಿನ ಕೆರಗೂಡು ಗ್ರಾಮದ ದಲಿತ ಯುವಕರು ದಿನಾಂಕ 12-12-82ರಂದು ಡಾ॥ ಅಂಬೇಡ್ಕರ್ ಸ್ಮರಣಾ ದಿನಾಚರಣೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು.

ಭಾಷಣಗಾರರಾಗಿ ಆಗಮಿಸಿದ್ದ ದೇವಯ್ಯಹರವೆ ಅವರು ಅಂಬೇಡ್ಕರ್‌ರವರ ಜೀವನ ಚಿತ್ರವನ್ನು ಬಹಳ ಸಂಕ್ಷಿಪ್ತವಾಗಿಯೂ ಮತ್ತು ಅವರ ವಿಚಾರಗಳನ್ನು ಬಹಳ ಗಂಭೀರವಾಗಿಯು ವಿಶ್ಲೇಷಿಸಿದರು ಅಂಬೇಡ್ಕರ್‌ರವರಂತವರು ದಲಿತ ಜನಾಂಗದಿಂದ ಹುಟ್ಟಬಾರದೆ ಹೋಗಿದ್ದರೆ, ನಾವು ಇನ್ನೂ 19ನೆ ಶತಮಾನದಲ್ಲೇ ಇರಬೇಕಾಗಿರುತಿತ್ತು. ಬಾಬಾ ಸಾಹೇಬರು ಬಾಲ್ಯದಲ್ಲೇ ಅಸ್ಪೃಶ್ಯತೆಯನ್ನು ಎದುರಿಸಿ ಹೋರಾಡಿ ತನ್ನ ಸ್ವಶಕ್ತಿ ಸಾಮರ್ಥ್ಯದಿಂದ ಮುಂದೆ ಬಂದವರು. ಅವರ ವಿಚಾರಗಳನ್ನು ಅರಿತು ನಾವೆಲ್ಲ ಒಂದಾಗಿ ನಮ್ಮ ಹಕ್ಕಿಗಾಗಿ ಹೋರಾಡುವುದೇ ನಮಗೆ ಉಳಿದಿರುವ ದಾರಿ, ಎಂದರು. ಈ ಇಂಡಿಯೂದಲ್ಲಿ ಹಣ, ಜಾತಿಯ ಹಮ್ಮು ಇರುವವನು ಕೊಲೆ ಸುಲಿಗೆ, ಅತ್ಯಾಚಾರಗಳನ್ನು ಮಾಡಿ ಸಲೀಸಾಗಿ ಗೆಲ್ಲುತ್ತಾನೆ. ಅದ್ಯಾವುದೂ ಇಲ್ಲದ ನಾವು ಸಂಘಟನೆ ಮತ್ತು ಹೋರಾಟ ಇವುಗಳಿಂದ ಮಾತ್ರ ನಾವು ಸಮಾನತೆಯನ್ನು ಈ ದೇಶದಲ್ಲಿ ಪಡೆಯಲು ಸಾಧ್ಯವೆಂದು ನುಡಿದರು.

ಮೈಸೂರು ಜಿಲ್ಲೆಯ ದಲಿತ ಸಂಘರ್ಷ ಸಮಿತಿ ಸಂಚಾಲಕರಾದ ಶ್ರೀ ನಾಗರಾಜ್ ಮುಳ್ಳೂರು ಅವರು ಮಾತನಾಡುತ್ತಾ ಸಂಘರ್ಷ ಸಮಿತಿಯ ಧ್ಯೇಯ ಧೋರಣೆಗಳು ಮತ್ತು ಮೂಢನಂಬಿಕೆಯ ಆಚಾರ ವಿಚಾರಗಳ ಬಗ್ಗೆ ಹೇಳಿದರು. ಹಿಂದೂ ಧರ್ಮ ಕೆಟ್ಟ ಕತೆಗಳನ್ನು ಸೃಷ್ಟಿಸಿ ದಲಿತ ಜನಾಂಗ... ಮನಸ್ಸಲ್ಲಿ ಭಯದ ವಾತಾವರಣ ಸೃಷ್ಟಿಸಿದೆ. ಅ... ರಿಂದ ದಲಿತರು ಸುಲಭವಾಗಿ ಶೋಷಣೆಗೆ ಗು... ಯಾಗಿರುವರು ಎಂದರು. ರಾಜಕೀಯವಾ... ಧಾರ್ಮಿಕವಾಗಿ, ಹಾಗೂ ಸಾಮಾಜಿಕವಾ... ಶೋಷಣೆಗೆ ಒಳಗಾಗಿರುವ ನಾವು ಅಂಬೇಡ್ಕ... ರವರ ಸಿದ್ಧಾಂತವನ್ನು ತಿಳಿದುಕೊಂಡು ... ಇಂಡಿಯಾದ ವ್ಯವಸ್ಥೆಯ ವಿರುದ್ಧ ಹೋರಾಡಲ... ಕಂಕಣಬದ್ಧರಾಗಬೇಕೆಂದು ಯುವಕರಿಗೆಕರೆಯಿತ್ತ... ಸಂಘರ್ಷ ಸಮಿತಿ ದಲಿತ ಜನಾಂಗದ ಉಸಿರಾಗಿ... ಎಂದು ಸ್ಪಷ್ಟ ಪಡಿಸಿದರು.

ಸಿಡಿಲ್ ಹೊಡೆದಂತೆ ಮಾತನಾಡುವ ಮತ್ತೊ... ಭಾಷಣಕಾರ ಶ್ರೀ ಗಂಗಾರಾವ್ ಚಂಡಾಳ್‌ರವರ... ಮೇಲು ಜನತೆಯ ಅಹಂಕಾರದ ಕಕ್ಕಸನ್ನು ಎತ... ತ್ತಿದ್ದ ಕೈಗಳು ಈಗ ನಮ್ಮ ಕಕ್ಕಸ್‌ನ್ನು ಎತ್ತಿಸು... ಅವರ ಕೊರಳ ಪಟ್ಟಿಯನ್ನು ಹಿಡಿದೆಳೆಯು... ಒಂದಾಗ ಬೇಕಾಗಿದೆ ಎಂದು ಗುಡುಗಿದರು.

ಮಂಡ್ಯ ಜಿಲ್ಲೆಯ ದ.ಸಂ.ಸ ಸಂಚಾಲಕರ... ಶ್ರೀ ನಾರಾಯಣ್ ಇಂಡಿಯಾದ ಬಂಡವಾಳಶಾ... ಗಳು ನಮ್ಮ ಜನರ ಆಸ್ತಿ ಪಾಸ್ತಿ ಕದ್ದಿದ್ದಾ... ಅದನ್ನು ನಾವು ಈಗ ಕಸಿಯಬೇಕಾಗಿದೆ ಎಂದ...

ಉತ್ಸಾಹಿ ತರುಣ ಶ್ರೀ ಕೆ. ಗುರುಸ್ವಾ... ಎಲ್ಲರಿಗೂ ವಂದನಾರ್ಪಣೆ ಮಾಡಿದರು. ಮುಂದ... ದಲಿತ ಕಲಾ ಮಂಡಲಿ ಯುವಕರಿಂದ '... ಸಂಗಪ್ಪನ ಕಗ್ಗೊಲೆ' ಎಂಬ ನಾಟಕವಾಡಲಾಯಿ...

—ನಂಜನಹಳ್ಳಿ ನಾರಾಯ...

ಕಾಗದದಿಂದ ಕಾರ್ಯರೂಪಕ್ಕೆ

ಭೂ ಸುಧಾರಣಾ ಚರಿತ್ರೆ-9

ಕ್ಷೀರಸಾಗರ

1974 ರ ಭೂ ಸುಧಾರಣಾ ತಿದ್ದುಪಡಿ ಯುದೆ ಕರ್ನಾಟಕ ಭೂಸುಧಾರಣೆಯಲ್ಲೇ ಒಂದು ದೊಡ್ಡ ಸಾಧನೆ. ಕಾಗದದಲ್ಲಿ ಇದ್ದ ಕಾನೂ ನ್ನು ಕಾರ್ಯ ರೂಪಕ್ಕೆ ಇಳಿಸುವ ಪ್ರಯತ್ನ ವೆಂದು ಹೇಳಬಹುದು. ಈ ತಿದ್ದು ಪಡಿಯ ಮುಖ್ಯ ಅಂಶವೆಂದರೆ ಕಾನೂನನ್ನು ಆಚರಣೆಗೆ ವ ಮಾಧ್ಯಮವನ್ನು ಬದಲಾಯಿಸಿದ್ದು. ದರೆ ಈ ಹಿಂದೆ ಗೇಣಿಗೆ ಸಂಬಂಧ ಪಟ್ಟ ಅಥವ ಮಿಯ ಒಡೆತನಕ್ಕೆ ಸಂಬಂಧ ಪಟ್ಟ ವಿಷಯ ನ್ನು ತೀರ್ಮಾನ ಮಾಡುವುದು ತಹಶಿಲ್ದಾರರು ಥವ ನ್ಯಾಯಾಲಯಗಳಾಗಿದ್ದುವು. ಈ ತಿದ್ದು ಿ ಕಾಯಿದೆಯಲ್ಲಿ ಈ ವಿಧಾನವನ್ನು ಬದಲಾಯಿ ಲಾಯಿತು. ಈಗ ಭೂ ನ್ಯಾಯ ಮಂಡಲಿಗಳನ್ನು ಚಿಸಲಾಯಿತು. ತಾಲ್ಲೂಕಿಗೊಂದರಂತೆ, ಕೆಲವೆಡೆ ಟ್ಟಿನ ಅರ್ಜಿಗಳಿದ್ದಲ್ಲಿ ಒಂದಕ್ಕಿಂತ ಹೆಚ್ಚು ಭೂ ನ್ಯಾಯ ಮಂಡಲಿಗಳನ್ನು ಸ್ಥಾಪಿಸಿದರು. ಹೀಗೆ ಟ್ಟು 184 ಭೂ ನ್ಯಾಯ ಮಂಡಲಿಗಳು ಹುಟ್ಟಿ ೊಂಡವು. ಕರ್ನಾಟಕ ರಾಜ್ಯದ ಬೆಳ್ಳಿ ಹಬ್ಬ ಆಚರಿಸುವುದರೊಳಗಾಗಿ ಎಲ್ಲಾ ಕೇಸುಗಳನ್ನೂ ಚುಕ್ತಾ ಮಾಡುವ ಉದ್ದೇಶದಿಂದ ಮತ್ತೆ ನೂರು ಭೂ ನ್ಯಾಯ ಮಂಡಲಿಗಳನ್ನು ರಚಿಸಲಾಯಿತು. ಹೀಗೆ ಒಟ್ಟು 284 ಭೂ ನ್ಯಾಯ ಮಂಲಿಗಳನ್ನು ಸ್ಥಾಪಿಸಿದರು.

1974 ರ ತಿದ್ದುಪಡಿ ಮಾಡುವುದಕ್ಕೆ ಮುಂಚೆ ಬೇರೆ ಬೇರೆ ಕಡೆಗಳಲ್ಲಿ ಚರ್ಚಾಗೋಷ್ಠಿಗಳನ್ನಿಟ್ಟು ಜನರ ಅಭಿಪ್ರಾಯ ಕೇಳಲಾಯಿತು. ಇಂಥ ಒಂದು ಪ್ರಯತ್ನವಾಗಿ 1972 ರಲ್ಲಿ ಮೈಸೂರಿನಲ್ಲಿ ಒಂದು ಸೆಮಿನಾರ್ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಹಲವಾರು ಗಣ್ಯವ್ಯಕ್ತಿಗಳು, ವಕೀಲರು, ಪ್ರೊಫೆಸರ್‌ಗಳು ರಾಜಕೀಯ ವ್ಯಕ್ತಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದರು. ಆದರೆ ಈ ಸಲಹೆಗಳಲ್ಲಿ ಬಹುಪಾಲು ತಿರಸ್ಕೃತವಾಗಿ 1-3-1974 ರಲ್ಲಿ ಇತರ ಕೆಲವು ಬದಲಾವಣೆಗಳೊಡನೆ ಕಾನೂನಾಯಿತು. ಈ ತಿದ್ದುಪಡಿಯ ಮುಖ್ಯ ಅಂಶಗಳೆಂದರೆ

1 ಭೂ ನ್ಯಾಯ ಮಂಡಲಿಗಳ ಸ್ಥಾಪನೆ.

2 ಗೇಣಿದಾರನಿಗೆ ಭೂ ಒಡೆತನದ ಹಕ್ಕನ್ನು ದೊರಕಿಸಿಕೊಡುವುದು.

3 ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರ

4 ಸಣ್ಣ ರೈತರು, ಅಶಕ್ತರು ಹಾಗೂ ವಿಧವೆಯರ ಭೂಮಿ ಗೇಣಿದಾರರ ಪಾಲಾದದ್ದು.

5 'ಕುಟುಂಬ' ಪದದ ಅರ್ಥ ಬದಲಾವಣೆ.

6 ಭೂಮಿತಿಯಲ್ಲಿ ಕಡಿತ ಮತ್ತು ನಿಬಂಧನೆಗಳನ್ನು ಹೇರಿದ್ದು.

7 ಸ್ಟ್ಯಾಂಡರ್ಡ್ ಎಕರೆಗಳಿಗೆ ಬದಲಾಗಿ ಯೂನಿಟ್' ಅಂಕ ಗಣಿಸಿದ್ದು.

ಹೀಗೆ ಇನ್ನೂ ಹಲವಾರು ರೀತಿಯ ತಿದ್ದುಪಡಿಗಳೊಂದಿಗೆ 74ರ ಕಾನೂನು ಬೀದಿಗಿಳಿಯಿತು.

ಭೂ ಮಂಡಲಿಗಳಲ್ಲಿ ಅಸಿಸ್ಟೆಂಟ್ ಕಮಿಷನ್ನರು ಛೇರ್ಮನ್ನರಾಗಿಯೂ ತಹಶಿಲ್ದಾರ್ ಸೆಕ್ರೆಟರಿಯಾಗಿಯೂ ಇರುತ್ತಾರೆ. ನಾಲ್ವರು ಸ್ಥಳೀಯ ಸದಸ್ಯರಿದ್ದು ಈ ಪೈಕಿ ಒಬ್ಬರು ಹರಿಜನ ಅಥವ ಗಿರಿಜನರ ಕೋಮಿಗೆ ಸೇರಿದವರಾಗಿರುತ್ತಾರೆ. ಈ ಸದಸ್ಯರನ್ನು ತನ್ನ ಇಷ್ಟ ಬಂದಂತೆ ಆಯ್ಕೆ ಮಾಡಬಹುದು, ಬದಲಾಯಿಸಬಹುದು ಅಥವ ತೆಗೆದು ಹಾಕಬಹುದು. ಈ ಸದಸ್ಯರಿಗೆ ಪ್ರಯಾಣದ ಖರ್ಚು ಮತ್ತು ಇತರ ಭತ್ಯಗಳನ್ನು ಕೊಡಲಾಗುತ್ತದೆ.

ಭೂ ನ್ಯಾಯ ಮಂಡಲಿಗಳ ಹಿಂದೆ ಆಳುವ ಸರ್ಕಾರಕ್ಕೆ ಇರುವ ರಾಜಕೀಯ ಲಾಭ ಮತ್ತು ಉದ್ದೇಶಗಳನ್ನು ತಿಳಿದು ಕೊಳ್ಳುವುದು ಬಹಳ ಕುತೂಹಲಕಾರಿ ಅಂಶವಾಗುತ್ತದೆ.

(ಮುಂದುವರೆಯುತ್ತದೆ)

ದಾಖಲೆಗಳು

ಕಾನ್ಪುರ ಬಳಿ ನಾಲ್ವರು ಹರಿಜನರ ಹತ್ಯೆ

ಕಾನ್ಪುರ, ಡಿ. ೩ (ಯು.ಎನ್.ಐ)—ಎಟಾವಾ ಜಿಲ್ಲೆಯ ಪೂಫಾನ್ ಗ್ರಾಮದಲ್ಲಿ ಮಂಗಳವಾರ ನಾಡರಸ್ತ್ರಗಳಿಂದ ಸಜ್ಜಿತವಾಗಿದ್ದ ಗುಂಪೊಂದು ಹಲ್ಲೆ ಮಾಡಿ ನಾಲ್ವರು ಹರಿಜನರನ್ನು ಕೊಂದ ಪ್ರಕರಣ ಬೆಳಕಿಗೆ ಬಂದಿದೆ.

ಹತ್ಯೆಗೊಳಗಾದ ಹರಿಜನರಲ್ಲಿ ಒಬ್ಬ ಮಹಿಳೆಯು ಸೇರಿದ್ದಾರೆ. ಈ ಹಲ್ಲೆಯಲ್ಲಿ ೬ ಮಂದಿ ಗಾಯಗೊಂಡಿದ್ದಾರೆ.

ಹರಿಜನರು "ಕಾರ್ತೀಕ ಪೂರ್ಣಿಮೆ"ಯ ಸಂದರ್ಭದಲ್ಲಿ ಪೂಜೆಯಲ್ಲಿ ತೊಡಗಿದ್ದಾಗ, ಈ ಗುಂಪು ದಾಳಿ ನಡೆಸಿತೆಂದು ಪೊಲೀಸ್ ಡಿ.ಐ.ಜಿ. ವಿನೋದ್‌ಕುಮಾರ್ ಜೈನ್ ಅವರು ಯುಎನ್‌ಐಗೆ ತಿಳಿಸಿದರು.

ತಲಾ ಆರು ಚದರಡಿ ಸ್ಥಳ ನೀಡುವ ಹಾಸ್ಟೆಲು !

14×6 ಅಡಿ ವಿಸ್ತೀರ್ಣದ ಒಂದು 'ಆಫೀಸು' ಕೋಣೆ, 14×9ರ ಓದುವ-ಉಣ್ಣುವ ಮಲಗುವ 'ಹಾಲ್' ಮತ್ತು 15×7ರ ಅಡುಗೆಕೋಣೆ-ಹೀಗೆ ಒಟ್ಟು 315 ಚದರ ಅಡಿ ಜಾಗವನ್ನು 40 ವಿದ್ಯಾರ್ಥಿಗಳು, ವಾರ್ಡನ್, ಅಡುಗೆಯಾಳು ಮತ್ತು ಸೇವಕರು, ಅಡುಗೆಬಿಲೆ, ಪಾತ್ರೆಗಳು, ಒಂದು ಕಪಾಟು ಮತ್ತು ಬೆಂಚು-ಇವೆಲ್ಲದರ ಜತೆ ಹಂಚಿಕೊಳ್ಳಬೇಕಾಗಿದೆ. ರಾತ್ರಿ ನಿದ್ರಿಸಲು ಒಬ್ಬನಿಗೆ ಸರಾಸರಿ 6 ಚದರ ಅಡಿ ಜಾಗ. ಬಾತ್ ರೂಂ, ಶೌಚಾಲಯಗಳು ಇಲ್ಲ. ಕುಡಿಯುವ ನೀರು ಬಹಳದೂರ. ರಾತ್ರಿ ಚಿಮಿಣಿ ದೀಪಗಳಿಂದ ತುಂಬುವ ಹೊಗೆಯ ಉಸಿರಾಟ!

ಇದು ಕಾಸರಗೋಡು ತಾಲ್ಲೂಕಿನ ವಾಣಿನಗರದ ಸರ್ಕಾರಿ ಹೈಸ್ಕೂಲಿನ ಗಿರಿಜನ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಸ್ಥಿತಿ

ಸ್ಥಳದ ಇಕ್ಕಟ್ಟಿನಿಂದಾಗಿ ಮೊದಮೊದಲು ವಿಧಿಯಿಲ್ಲದೆ ಕೋಣೆಯ ಮೇಲ್ಗಡೆ ಇರುವ ಅಡಿಕೆ ಮರದ ತುಂಡುಗಳ 'ಅಟ್ಟ'ದ ಮೇಲೆ 13 ಮಂದಿ ಮಕ್ಕಳು ನಿದ್ರಿಸುತ್ತಿದ್ದರು. ಒಂದು ದಿನ ಒಬ್ಬ ಹುಡುಗ ಕೆಳಗೆ ಬಿದ್ದು ಕಾಲಿಗೆ ಜಖಂ ಆಗಿ ಒಂದು ವಾರ ರಜೆ ಮಾಡಬೇಕಾಗಿ ಬಂದ ಬಳಿಕ ಈ 'ಮಾಳಿಗೆ ಆಶ್ರಯ'ವನ್ನು ನಿಲ್ಲಿಸಲಾಯಿತು" ಎಂದು ವಿದ್ಯಾರ್ಥಿಗಳು ತಿಳಿಸಿದರು.

ಗಿರಿಜನ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿರುವ ಸರಕಾರಿ ರೆಸಿಡೆನ್ಶಿಯಲ್ ಬೇಸಿಕ್ ಹಾಸ್ಟೆಲು ಕಾಸರಗೋಡು ತಾಲೂಕಿನಲ್ಲಿ ಇದೊಂದೇ.

ಕೃಪೆ: ಉದಯವಾಣಿ.

ಗೂಳೂರು ದಲಿತರ ಗೋಳು: ಎಂ.ಪಿ.,ಡಿ.ಸಿ.ಗಳ ಆಟ

ಕಳೆದ ಆರು ವರ್ಷಗಳಿಂದಲೂ ಸಾಗುವಳಿ ಮಾಡುತ್ತಿರುವ ಭೂಮಿಯ ಮೇಲೆ ಒಡೆತನ ಪಡೆಯಲು ತುಮಕೂರಿನ ದಲಿತರು ಹೋರಾಡುತ್ತಿರುವಾಗ ಎಂ. ಪಿ. ಗಳು ಮತ್ತು ಅಧಿಕಾರಿಗಳು ನಡೆದುಕೊಂಡ ರೀತಿ ಅಸಹ್ಯವಾಗಿದೆ.

ತುಮಕೂರಿನ ಗೂಳೂರು ಮತ್ತು ಹೊನ್ನೇನಹಳ್ಳಿ ದಲಿತರು ಉಳುಮೆ ಮಾಡುತ್ತಿರುವ ಗೋಮಾಳ ಮಂಜೂರಾತಿಗೆ, ಮತ್ತು ಸಂಚಾಲಕ ನಾಗರಾಜ್ ಹಾಗೂ ಇತರರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ಮಾತನಾಡಲು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ತುಮಕೂರು ಕ್ಷೇತ್ರದ ಎಂ. ಪಿ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಸೆಕ್ರೆಟರಿ ಕೆ. ಲಕ್ಕಪ್ಪನವರ ಮನೆಗೆ ಹೋದಾಗ ನಡೆದ ಮಾತುಕತೆ ಸ್ವಾರಸ್ಯಕರವಾಗಿದೆ.

ಸುಮಾರು ಬೆಳಿಗ್ಗೆ 6–45 ಗಂಟೆಗೆ 20 ಅಡಿ ಟಾರ್ ಹಾಕಿದ ಬೀದಿಯಲ್ಲಿ ಗಾಜಿನ ಮನೆ ಪ್ರವೇಶಿಸಿದೆವು. ಲಕ್ಕಪ್ಪನವರು ಕಾಲಮೇಲೆ ಕಾಲಾಕಿ ದರ್ಬಾರಿನಲ್ಲಿದ್ದಂತೆ ಕಂಡರು. ಸುತ್ತ ಕೆಲವು ಚೇಲಾಗಳೂ ಇದ್ದರು. ಅಲ್ಲಲ್ಲಿ ಅವ್ಯವಸ್ಥಿತವಾಗಿ ಚದುರಿದ ಕುರ್ಚಿಗಳ ಮೇಲೆ ನಾವು ಕುಳಿತೆವು. ಇನ್ನು ಒಬ್ಬರಿಗೆ ಜಾಗ ಸಿಗದೆ ನಿಂತೇ ಇದ್ದರು.

ನಾವು : ನಮಸ್ಕಾರ ಸಾರ್

ಎಂ.ಪಿ: (ದಿಮಾಕಿನಿಂದ) ಯಾರು ? ಏನು ?

ನಾವು : ಸಾರ್, ನಾವು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು.

ಎಂ.ಪಿ: ಸರಿ, ಏನು ?

ನಾವು : ನಿಮಗೆ ಗೂಳೂರಿನ ಬಳಿ ಕಿತಗಾನಹಳ್ಳಿ ಭೂಮಿ ವಿಷಯ ಗೊತ್ತಲ್ವ ಸಾರ್.

ಎಂ.ಪಿ: ಇಲ್ಲ. ಏನು ? [ಈ ವಿಷಯದಲ್ಲಿ ನಾಲ್ಕಾರು ಬಾರಿ ಪೋಲೀಸರಿಗೂ ಅಧಿಕಾರಿಗಳಿಗೂ ಫೋನ್ ಮಾಡಿದ್ದರು.]

ಒಬ್ಬರು : ನೋಡಿ ಸಾರ್, ಗೂಳೂರು ಮತ್ತೆ ಹೊನ್ನೇನಹಳ್ಳಿ ದಲಿತರು 6–7 ವರ್ಷಗಳಿಂದ ಗೋಮಾಳನ ಉಳುತ್ತಿದ್ದಾರೆ. ಮಂಜೂರು ಮಾಡಿ ಅಂತ ಮಂತ್ರಿಗಳವರೆಗೆ ಎಲ್ಲ ಅಧಿಕಾರಿಗಳಿಗೂ ಮನವಿ ಸಲ್ಲಿಸಿದ್ದಾರೆ. ಕೆಲವು ದಿನಗಳ ಹಿಂದೆ ಅಲ್ಲಿನ ದಲಿತರ ಮೇಲೆ ಒಕ್ಕಲಿಗರು ದೌರ್ಜನ್ಯ ಹಲ್ಲೆ ನಡೆಸಿದ್ದಾರೆ. ನಮ್ಮ ಸಂಚಾಲಕರ ಕಾಲು ಮುರಿದಿದ್ದಾರೆ. ಜನ ಆಸ್ಪತ್ರೆ ಸೇರಿದ್ದಾರೆ.

ಎಂ. ಪಿ: ಆ ಜಮೀನಿನ ಮೇಲೆ ಯಾವ ಹಕ್ಕಿದೆ ನಿಮಗೆ?

ನಾವು : 6–7 ವರ್ಷ ವರ್ಷಗಳಿಂದ ಸಾಗುವಳಿ ಮಾಡ್ತಿದೀವಿ.

ಎಂ.ಪಿ : ಪಹಣಿ ಇದೆಯಾ ?

ನಾವು : ಪಹಣಿ ತಕ್ಕಳಕ್ಕೆ ಬಿಟ್ರಲ್ವ ಸಾರ್.

ಎಂ.ಪಿ : ಮತ್ತೆ ಯ್ಯಾವ ಆಧಾರದ ಮೇಲೆ ಕೇಳ್ತೀರಾ ?

ನಾವು : ನೋಡಿ ಸಾರ್, ಜಮೀನು ಸರ್ಕಾರಿ ಗೋಮಾಳ. ನಾವು ಅಕ್ರಮ ಪ್ರವೇಶ ಮಾಡಿದರೆ, ಸರ್ಕಾರ ಕೇಳುತ್ತೆ' ನಮ್ಮ ಬೆಳೆ ನಾಶ ಮಾಡಿ ರಾತ್ರೋರಾತ್ರಿ ನೀಲಗಿರಿ ಗಿಡ ಹಾಕೋಕೆ ಇವರ್ಯಾರು ?

ಎಂ.ಪಿ : ನೋಡಿ ನೀವು ಗೌರ್ಮೆಂಟು ಕೇಳಬೇಕು, ನನ್ನತ್ರ ಅಲ್ಲ.

ನಾವು : ನೋಡಿ ಸಾರ್, ನಾವು ದಲಿತರು. ನಮಗೆ ಸಪೋರ್ಟ್ ಮಾಡಿ ಭೂಮಿ ಮಂಜೂರು ಮಾಡಿಸಿಕೊಡಬೇಕು.

ಎಂ.ಪಿ : ನೋಡ್ರಯ್ಯ, ನನಗೂ ನಿಮಗೂ ಯಾವ ಸಂಬಂಧವೂ ಇಲ್ಲ. ನೀವು ಅಧಿಕಾರಿಗಳನ್ನು ಕೇಳಿಹೋಗಿ.

ನಾವು : ಎಲೆಕ್ಷನ್‌ನಲ್ಲಾದರೆ ನಮ್ಮತ್ರ ಕೈಮುಕ್ಕೊಂಡು ಬರ್‍ತೀರಾ ಈಗ್ಯಾಕೆ ನಮ್ಮ ಕೆಲಸ ಮಾಡ್ಕೊಡಲ್ಲ.

ಎಂ.ಪಿ : ನಾನ್ಯಾವಾಗ ನಿಮಗೆ ಕೈಮುಗಿದಿದ್ದೀನಪ್ಪ. ನೀವು ಅಧಿಕಾರಿಗಳತ್ರ ಹೋಗಿ.

ನಾವು : ನೋಡಿ ಸಾರ್. ನಾವು ಬೀದೀಲೋಗೋರ್‍ನ ಕೇಳೋಕಾಗುತ್ತಾ. ನಾವು ಓಟಾಕಿ ಕಳಿಸಿದ ಪ್ರತಿನಿಧಿಗಳನ್ನು ಕೇಳೋದು. ನಿಮ್ಮತ್ರ ಯಾಕ್ ಬಂದಿದೀವಿ ಅನ್ನೋದನ್ನೇ ತಿಳಕಂಡಿಲ್ವಲ್ಲ ಸಾರ್.

ಎಂ.ಪಿ : ನೀವೇನು ನನಗೆ ಓಟಾಕಿದೀರೇನಯ್ಯ, ನೀವಾಕಿರೋದು ಇಂದಿರಾಗಾಂಧಿಗೆ ಅವರನ್ನೇ ಕೇಳಿ ಹೋಗಿ, ನಂಗು ನಿಮಗೂ ಯ್ಯಾವ ಸಂಬಂಧಾನೂ ಇಲ್ಲ. ಏನಾದ್ರೂ ಮಾಡ್ಕೊ ಹೋಗಿ.

ನಾವು : ನೋಡಿ ಸಾರ್, ಇನ್ನೊಂದು ಸಾರಿ ಕಾಲೋನಿಗಳಿಗೆ ಓಟು ಕೇಳಾಕೆ ಬಂದ್ರೆ.

ಎಂ.ಪಿ : ಆ ವಿಷಯ ನನ್ನತ್ರ ಹೇಳ್ಬೇಡಿ, ಹೋಗ್ರಿ.

ನಾವು : ನಾವು ಹೇಳೋದೆ ನಿಮ್ಮತ್ರ. ನೀವು ಓಟು ಕೇಳಾಕೆ ಬನ್ನಿ.

—ನರಸಿಂಹಯ್ಯ

ಡಿ.ಸಿ.ಯ ಹಿಂಬಾಗಿಲು ಮುಂಬಾಗಿಲು

8–12–82ರಂದು ದಲಿತ ಮಹಿಳಾ ಒಕ್ಕೂಟ ತುಮಕೂರು ಶಾಖೆ, ಗೂಳೂರು ಹೊನ್ನೇನಹಳ್ಳಿ ದಲಿತರ ಭೂಮಿ ಹೋರಾಟಕ್ಕೆ ಬೆಂಬಲಿಸಿ ಮೆರವಣಿಗೆ ಏರ್ಪಡಿಸಿತ್ತು. ಸು. 600ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಎಸ್ ಆರ್. ಕಾಲೋನಿಯಿಂದ ಹೊರಟ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆನಂತರ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಜಮೀನು ಮಂಜೂರು ಮಾಡುವಂತೆ ಒತ್ತಾಯಿಸಿತು. ಮಹಿಳಾ ಪ್ರತಿನಿದಿಗಳನ್ನು ಭೇಟಿಮಾಡಲು ಹಿಂದೆಗೆದ ಡಿ. ಸಿ. ಶ್ರೀಮತಿ ವತ್ಸಲಾ ವತ್ಸ ಮಹಿಳೆಯರು ಮುಂದಿನ ಬಾಗಿಲ ಬಳಿ ಇದ್ದಾಗ ಹಿಂದಿನಿಂದಲೂ, ಹಿಂದಿನ ಬಾಗಿಲ ಬಳಿ ಬಂದಾಗ ಮುಂದಿನಿಂದಲೂ ತಪ್ಪಿಸಿಕೊಂಡು ಹೋಗಲು ಹೊಂಚು ಹಾಕಿದರು. ಮಹಿಳೆಯರು ಕೊನೆಗೆ ಎರಡೂ ಬಾಗಿಲ ಬಳಿ ಘೇರಾಯಿಸಿದಾಗ ಬೇರೆದಾರಿ ಇಲ್ಲದೆ ಅವರನ್ನು ಭೇಟಿಮಾಡಿ ಮನವಿ ತೆಗೆದುಕೊಂಡರು. ಮೆರವಣಿಗೆಯ ನಂತರ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕರಾದ ಶ್ರೀಮತಿ ಕೆ. ಗಂಗಮ್ಮನವರು ಮಹಿಳೆಯರನ್ನುದ್ದೇಶಿಸಿ ಮಾತನಾಡಿದರು.

ಪ್ರತಿಕ್ರಿಯೆ

ಜಯರಾಮಯ್ಯನಿಗೆ ಅಭಿನಂದನೆ

ಮಾನ್ಯರೇ,

ಪಂಚಮದಲ್ಲಿ ಶ್ರೀ ಜಯರಾಮಯ್ಯನವರ ಬಗ್ಗೆ ಓದಿ ಬಹಳ ಸಂತೋಷವಾಯಿತು. ಈ ಮೂರು ನಾಲ್ಕು ವರ್ಷ ಅವರು ಪಟ್ಟಿರಬಹುದಾದ ಸಂಕಟ, ಕಷ್ಟಗಳೆಲ್ಲವೂ ಅವರ ಅಹಿಂಸಾತ್ಮಕ ಹೋರಾಟದಿಂದ ತೀರಿರುವುದು ದಲಿತರ ಹಾಗೂ ಇತರರ ನ್ಯಾಯಯುತ ಹೋರಾಟಗಳೆಲ್ಲಕ್ಕೂ ಸ್ಫೂರ್ತಿದಾಯಕ. ಗಾಂಧೀವಾದವನ್ನು ಒಪ್ಪಿಕೊಂಡು ಆ ತತ್ವದ ಮೇಲೆ ಹೋರಾಡಲು ನಿಸ್ಸೀಮ ತಾಳ್ಮೆ, ಆತ್ಮವಿಶ್ವಾಸ ಹಾಗೂ ನೈತಿಕ ಸ್ಥೈರ್ಯ ಬೇಕಾಗುತ್ತದೆ. ನಮ್ಮ ಪತನವನ್ನು ಆಶಿಸುವವರ ಬಗ್ಗೆಯೂ ನೈಜಪ್ರೀತಿ ಇರಬೇಕಾಗುತ್ತದೆ. ಇಂತಹ ಮನೋಭಾವದಿಂದ ಹೋರಾಡುವವರಿಗೆ ಜಯ ಖಂಡಿತವಲ್ಲದೆ ಪರಸ್ಪರ ಸ್ನೇಹಭಾವನೆಯಷ್ಟೇ ಉಳಿಯುತ್ತದೆ. ಗಾಂಧೀವಾದದಲ್ಲಿ ನಂಬಿಕೆ ಇಟ್ಟಿರುವವರೆಲ್ಲರಿಗೂ ಜಯರಾಮಯ್ಯನವರ ಹೋರಾಟದ ಕತೆ ಚಿರಸ್ಮರಣೀಯವಾಗಿದೆ.

ಶ್ರೀ ಜಯರಾಮಯ್ಯನವರಿಗೆ ನನ್ನ ಅಭಿನಂದನೆಗಳು.

—ಸಿ. ವಿ. ವೇಣುಗೋಪಾಲ
ಧಾರವಾಡ

ಬಾಡಿಗೆ ಮನೆ: ದೇವರ ಶಾಮೀಲು

ನಾನೊಬ್ಬ ಹೊಲೆಮಾದಿಗನಾಗಿದ್ದು ಮಂಡ್ಯದಲ್ಲಿ ಸರ್ಕಾರಿ ಉದ್ಯೋಗದಲ್ಲಿದ್ದೇನೆ. ಒಮ್ಮೆ ಸಾಮಾನು ತರಲೆಂದು ದಿನಿಸಿ ಅಂಗಡಿಗೆ ಹೋಗಿದ್ದೆ, ಅಲ್ಲಿ ನನಗೂ ಮತ್ತು ಸವರ್ಣೀಯ ಅಂಗಡಿ ಮಾಲೀಕನಿಗೂ ನಡೆದ ಸಂಭಾಷಣೆ ಹೀಗಿತ್ತು:

ಮಾಲಿಕ: ತಾವು ಕೆಲಸದಲ್ಲಿ ಇದ್ದೀರಾ ?

ನಾನು: ಹೌದು. ಮಾಲಿಕ: ಎಲ್ಲಿದ್ದೀರಾ?

ನಾನು: ಸಕ್ಕರೆ ಕಾರ್ಖಾನೆಯಲ್ಲಿ.

ಮಾಲಿಕ: ಮನೆ ಎಲ್ಲಿ ಮಾಡಿದ್ದೀರಾ?

ನಾನು: ಸ್ವಲ್ಪ ದೂರದಲ್ಲಿ.

ಮಾಲಿಕ: ಎಲ್ಲಾ ಸೌಕರ್ಯವಿದೆಯೇ ಎಷ್ಟ ಬಾಡಿಗೆ ಕೊಡುತ್ತಿದ್ದೀರಾ?

ನಾನು: ನೀರಿಗೆ ತುಂಬ ತೊಂದರೆ, ಬಾಡಿಗೆ 85ರೂ ಕೊಡುತ್ತಿದ್ದೇನೆ.

ಮಾಲಿಕ: ಹಾಗಾದರೆ ನಮ್ಮ ಮನೆಯಲ್ಲಿ ನೀರಿನ ಸೌಕರ್ಯವಿದೆ, ಬಾಡಿಗೆ ತುಂಬ ಕಡಿಮೆ ತಮಗೆ ಅನುಕೂಲವಾದರೆ ಬರಬಹುದಲ್ಲಾ.

ನಾನು ಮಾಲಿಕನ ಮಾತನ್ನು ಕೇಳಿ ಮೌನತಾಳಿದೆ. ಮೌನವನ್ನು ಮುರಿದು 'ಏಕೆ ಸುಮ್ಮನಾಗಿದ್ದೀರಿ' ಎಂದು ಮಾಲಿಕ ಪದೇ ಪದೇ ಒತ್ತಾಯ ಮಾಡುತ್ತಿದ್ದ. ನಾನು ಮೌನದಿಂದಿರಲು ಕಾರಣವಿಷ್ಟೆ, ನಾನು ಜಾತಿಯನ್ನು ಹೇಳದೇ ಮನೆ ಮಾಡಿದರೆ ಜಾತಿ ಗೊತ್ತಾದ ಮೇಲೆ ಏನಾದರೂ ನೆಪ ಹೂಡಿ ಖಾಲಿ ಮಾಡಿಸುತ್ತಾರೆ. ಈ ಕಾರಣದಿಂದ ಜಾತಿಯನ್ನು ಹೇಳೀ ಈ ಕೊಳೆತು ನಾರುವ ಸಮಾಜದಲ್ಲಿ ಬಾಳಬೇಕೆಂದು ತೀರ್ಮಾನಿಸಿದೆ, ಮತ್ತೆ ಒತ್ತಾಯ ಮಾಡಿದಾಗ "ನಾನು ಹೊಲೆ ಮಾದಿಗ ಮನೆ ಕೊಡುತ್ತೀರಾ?" ಎಂದೆ ಅಷ್ಟೆ.

ಮಾಲಿಕ: ತುಂಬ ಉಪಕಾರ ಮಾಡಿದಿರಿ ನಾವು ಈ ಜಾತಿಯನ್ನು ಕನಸಿನಲ್ಲೂ ನೆನಸುವುದಿಲ್ಲ ನಿಮಗೆ ದೇವರು ಒಳ್ಳೆಯದು ಮಾಡಲಿನೀವು ಎಷ್ಟು ಸತ್ಯವನ್ನು ನುಡಿಯುತ್ತೀರಿ, ಆ ಭಗವಂತ ನಿಮ್ಮನ್ನು ಸುಖವಾಗಿಡಲಿ.

ಮಾಲಿಕನ ಜಾತಿವಾದದ ಮಾತನ್ನು ಕೇಳಿದಾಗ ನಾನು ಆಕ್ರೋಶದಿಂದ "ಆ ಭಗವಂತನು ಏನಾದರೂ ಇರುವುದಾದರೆ ಆ....ನನ್ನ ಮಗನಿಗೆ ಎಕ್ಕಡದಲ್ಲಿ ಹೊಡೆಯುತ್ತೇನೆ. ನೀವೇನಾದರೂ ಅವನನ್ನು ನೋಡಿದ್ದೀರಾ?" ಎಂದಾಗ ಮಾಲೀಕ ಬೆಪ್ಪಾದ. —ಶ್ರೀನಿವಾಸ ಹೊಲೆಮಾದಿಗ,ಮಂಡ್ಯ

ಭ್ರಷ್ಟ ರಾಜಕಾರಿಣಿಗಳಿಗೆ ಜನರ ಅಂತಿಮ ಎಚ್ಚರಿಕೆ

(ಮೊದಲ ಪುಟದಿಂದ)

ಬೆಳಗ್ಗೆ ಸೂರ್ಯ ಇನ್ನೂ ಹುಟ್ಟಿರಲಿಲ್ಲ ನಾವು ಗೆಜ್ಜಗನ ಹಳ್ಳಿಯವರೆಗೆ ನಡೆದುಕೊಂಡೆಹೋದೆವು. ಆ ಊರಿನ ಜನ ಕೂಲಿಗೆ ಹೋಗಲು ರೆಡಿಯಾಗಿ ನಿಂತಿದ್ದರು. ಒಂದೆರಡು ಹಾಡು ಹೇಳಿ ಚುನಾವಣೆ ಬಹಿಷ್ಕಾರದ ವಿಚಾರದ ಬಗ್ಗೆ ತಿಳಿವಳಿಕೆನೀಡಿದೆವು. ನಂತರ ಅಲ್ಲಿಂದ ನರಸೀಪುರಕ್ಕೆ ಬಸ್ಸು ಹತ್ತಿದೆವು.

ಅದು ಬಸ್ ಸ್ಟ್ಯಾಂಡ್. ಎಲೆಕ್ಷನ್ನಿನ ಕಾರು ವ್ಯಾನುಗಳಿಂದ ರಸ್ತೆಗಳು ತುಂಬಿದ್ದವು. ಎಲ್ಲೆಲ್ಲು ವಿಚಿತ್ರ ಗದ್ದಲ. ವರದಯ್ಯ ಹಾಡು ಶುರುಮಾಡಿದ ಕೂಡಲೇ ನೂರಾರು ಜನರು ಒಂದೆಡೆ ಕಲೆತರು. ವೆಂಕಟರಮಣರ ಚರಿತ್ರೆಯನ್ನೊಳಗೊಂಡ ಹಾಡಿಗೆ ಮತ್ತೆ ಮತ್ತೆDemand ಬಂತು.

"ನೀವು ಯಾವ ಪಕ್ಷದವರು?"ಎಂದು ಅನೇಕರು ಕೇಳಿದರು.

ನಾವು ಯಾವ ಪಕ್ಷದ ಪರವಾಗಿಯೂ ಪ್ರಚಾರ ಮಾಡುವುದಿಲ್ಲವೆಂಬ ವಿಚಾರ ಅವರಿಗೆಲ್ಲ ಒಗಟಿನಂತೆ ಕಂಡಿತು. ನಮ್ಮ ಹಣಕಾಸಿನ ತೊಂದರೆಗಳನ್ನು ಹೇಳಿಕೊಂಡ ಕೂಡಲೆ ಅನೇಕರುಧಾರಾಳವಾಗಿ ಹಣ ಸಹಾಯ ಮಾಡಿದರು.

ಒಬ್ಬ ಮುದುಕ ಎಲ್ಲರಿಗೂ ಟೀ ಕೊಡಿಸಿದ. "ಸರ್ಕಾರನ ಚೆನ್ನಾಗಿ ಉಗಿತೀರಿ" ವಿಚಿತ್ರ ಖುಷಿಪಟ್ಟ. ನಂತರ ಭಗವಾನ್ ಟಾಕೀಸಿನ ಎದುರು ಸರ್ಕಲ್ಲಿನಲ್ಲಿ ನಾವು ಹಾಡು ಹೇಳಿದಾಗ ಜನರು ಕಿಕ್ಕಿರಿದರು. ಮುಂದಕ್ಕೆ ಹೆಜ್ಜೆಯಿಡುವುದೂ ಕಷ್ಟವಾಯಿತು.

ಯಾವುದೋ ರಾಜಕೀಯ ಪಕ್ಷದವರು "ಒಂದು ಕಾರು ಕೊಡ್ತೇವೆ 15 ದಿವಸ ಇಲ್ಲೇ ಇರಿ. ಊಟ ತಿಂಡಿ ವ್ಯವಸ್ಥೆ ಮಾಡ್ತೀವಿ" ಎಂದರು. ನಾವು ನಗುತ್ತಲೇ ನಿರಾಕರಿಸಿದೆವು. ಯಾರೋ ಒಬ್ಬರು ಎಲ್ಲರಿಗು ಹೋಟಲಲ್ಲಿ ಊಟ ಹಾಕಿಸಿದರು. ಜನರು ಹೋಟೆಲ್ ಮುಂಭಾಗದಲ್ಲಿ ಹಾಡು ಕೇಳಲು ಮುತ್ತಿಗೆ ಹಾಕಿದ್ದರಿಂದ ಹಿಂಬಾಗಿಲಿಂದ ಪರಾರಿಯಾಗಬೇಕಾಯಿತು.

ನಮ್ಮ ಅನುಭವದ ಪ್ರಕಾರ ಇಲ್ಲಿನ ಜನರಿಗೆ ಸರ್ಕಾರದ ರೀತಿ ನೀತಿಗಳ ಬಗ್ಗೆ ತೀವ್ರವಾದ ಕೋಪವಿದೆ. ಅನೇಕ ಹಳ್ಳಿಗಳು ತಾವಾಗಿಯೆ "ಮತ ಬಹಿಷ್ಕಾರ" ಘೋಷಿಸಿಕೊಂಡಿವೆ. ಅನೇಕ ಕಡೆ ವೋಟು ಕೇಳಲು ಬಂದವರಿಗೆ ಬೂಟಿನಲ್ಲಿ ಹೊಡೆಯುತ್ತೇವೆ ಅಂತಲೂ ಹೇಳುತ್ತಿದ್ದಾರೆ. ಕೆಲವು ಕಡೆ ಹಾಲಿ ಕಾಂಗ್ರೆ ಪುಡಾರಿಗಳು ಜನರಿಂದ ಏಟು ತಿಂದಿದ್ದಾರೆ. ಮತ್ತೆನಾಗುತ್ತೋ ಕಾದು ನೋಡಬೇಕು.

.ಮುಳ್ಳೂರು ನಾಗರಾಜ

ಸಂಪಾದಕ ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರಿ, 2514, ಕೆ, ಜಿ. ಕೊಪ್ಪಲು, ಮೈಸೂರು-14.